D-72-(137)

⊖ **ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾರಾಯಣಸ್ವಾಮಿ ಇವರು ನಿಯಮ 72ರ ಮೇರೆಗೆ ನೀಡಿರುವ ಗಮನ ಸೆಳೆಯುವ ಸೂಚನಾ ಪತ್ರಕ್ಕೆ ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆ:**

**ವಿಷಯ: ದಿನಾಂಕ:19.01.2016 ರಂದು ಸರ್ಕಾರವು ಹೊರಡಿಸಿರುವ ಆದೇಶದಂತೆ 2004ರ ತರುವಾಯ ನಿರ್ಮಿಸಿರುವ ವಸತಿ ಸಂಕೀರ್ಣಗಳು ಗ್ರೂಪ್ ಹೌಸಿಂಗ್, ವಿಲ್ಲಾಗಳು, ವಾಣಿಜ್ಯ ಮಳಿಗೆಗಳು, ಶಾಲಾ ಕಾಲೇಜು ಕಟ್ಟಡಗಳಲ್ಲಿ STP (Sewage Treatment Plant)ಗಳನ್ನು ಕಡ್ಡಾಯವಾಗಿ ನಿರ್ಮಿಸಿ ಕೊಳಚೆ ನೀರನ್ನು BWSSB ಯ ಕಾಲುವೆಗೆ ಬಿಡಬೇಕೆಂಬ ಆದೇಶವನ್ನು ಮಾಡಿರುತ್ತಾರೆ. ಆದರೆ 2004ರಲ್ಲಿ ನಿರ್ಮಿಸಿರುವ ಕಟ್ಟಡಗಳಲ್ಲಿ ಈ ವ್ಯವಸ್ಥೆಯನ್ನು ಮಾಡಿರುವುದಿಲ್ಲ. ಕಾರಣ ಆಗ ಈ ಕಾನೂನು ಜಾರಿಯಲ್ಲಿ ಇರಲಿಲ್ಲ. ದಿನಾಂಕ:19.01.2016 ರಂದು ಆದೇಶವನ್ನು ಹೊರಡಿಸಿ ಈ ಹಳೆಯ ಕಟ್ಟಡಗಳಲ್ಲೂ STP ಯನ್ನು ಕಡ್ಡಾಯವಾಗಿ ನಿರ್ಮಿಸಬೇಕೆಂಬ ಅವೈಜ್ಞಾನಿಕ ಆದೇಶವನ್ನು ಮಾಡಿರುತ್ತಾರೆ. ಈಗ STP ಯನ್ನು ನಿರ್ಮಿಸಲು ಆ ಸಮುಚ್ಚಯಗಳಲ್ಲಿ ಸ್ಥಳಾವಕಾಶವಿರುವುದಿಲ್ಲ.**

**ಈ ಹಿನ್ನೆಲೆಯಲ್ಲಿ ಸದರಿ ಕಾನೂನನ್ನು ಮರು ಪರಿಶೀಲಿಸಿ, ಹೊಸದಾಗಿ ನಿರ್ಮಿಸುವ ಕಟ್ಟಡಗಳಿಗೆ ಅನ್ವಯಿಸುವಂತೆ ಹಾಗೂ ಈ ಆದೇಶ ಜಾರಿಗೆ ಬಂದ ದಿನಾಂಕ:19.01.2016ರ ಹಿಂದೆ ನಿರ್ಮಿಸಿರುವ ಕಟ್ಟಡಗಳಿಗೆ ಅನ್ವಯಿಸದಂತೆ ಪರಿಶೀಲಿಸಿ ಸೂಕ್ತ ಮಾರ್ಗಸೂಚಿಯನ್ನು ಹೊರಡಿಸುವುದು ಸಾರ್ವಜನಿಕವಾಗಿ ಅತ್ಯಗತ್ಯವಾದುದರಿಂದ ಮಹತ್ವದ ವಿಚಾರದ ಬಗ್ಗೆ.**

****

ಉತ್ತರ:

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಅಧಿಸೂಚನೆ ಸಂಖ್ಯೆ:ಎಫ್ಇಇ/316/ಇಪಿಸಿ/2015, ದಿನಾಂಕ:19.01.2016 ರಲ್ಲಿ ಈ ಕೆಳಕಂಡಂತೆ ಆದೇಶ ಹೊರಡಿಸಿರುತ್ತದೆ.

1. 20 ಮನೆಗಳುಳ್ಳ ವಸತಿ ಸಮುಚ್ಚಯ ಅಥವಾ 2,000 ಚದರ ಮೀಟರ್ ಮತ್ತು ಅದಕ್ಕಿಂತ ಹೆಚ್ಚಿನ ವಿಸ್ತೀರ್ಣ ಹೊಂದಿರುವ ಕಟ್ಟಡಗಳು.
2. ವಾಣಿಜ್ಯ ಕಟ್ಟಡಗಳು 2,000 ಚದರ ಮೀಟರ್ ಅಥವಾ ಅದಕ್ಕಿಂತ ಮೇಲ್ಪಟ್ಟು ವಿಸ್ತೀರ್ಣ ಹೊಂದಿರುವ ಕಟ್ಟಡಗಳು.
3. ಶಿಕ್ಷಣ ಸಂಸ್ಥೆಗಳು 5,000 ಚದರ ಮೀಟರ್ ಅಥವಾ ಅದಕ್ಕಿಂತ ಮೇಲ್ಪಟ್ಟು ವಿಸ್ತೀರ್ಣ ಹೊಂದಿರುವ ಕಟ್ಟಡಗಳು.

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ದಿನಾಂಕ:19.01.2016ರ ಅಧಿಸೂಚನೆಯಂತೆ, ಬೆಂಗಳೂರು ಒಳಚರಂಡಿ (ತಿದ್ದುಪಡಿ) ವಿನಿಯಮಗಳು, 2015 ರಲ್ಲಿ ವಿನಿಯಮ 4(ಎ) ಅನ್ನು ಅಳವಡಿಸಿ, ಬೆಂಗಳೂರು ಜಲಮಂಡಳಿಯು ಸಂಖ್ಯೆ:BWSSB/C/CAO-S/4138/2015-16, ದಿನಾಂಕ:25.02.2016 ರಲ್ಲಿ ಅಧಿಸೂಚನೆಯನ್ನು ಹೊರಡಿಸಿ ಮೇಲ್ಕಂಡ ಕಟ್ಟಡಗಳಿಗೆ ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ಅಳವಡಿಸಿಕೊಳ್ಳಲು ಆದೇಶಿಸಲಾಗಿರುತ್ತದೆ.

ಬೆಂಗಳೂರು ಒಳಚರಂಡಿ (ತಿದ್ದುಪಡಿ) ವಿನಿಯಮಗಳು, 2018 ರಲ್ಲಿ ವಿನಿಯಮ 4ಎ ಗೆ ಕೆಲವು ಮಾರ್ಪಾಡುಗಳೊಂದಿಗೆ ಬೆಂಗಳೂರು ಜಲಮಂಡಳಿಯ ಅಧಿಸೂಚನೆ ಸಂಖ್ಯೆ: BWSSB/C/CAO-S/5008/ 2017-18, ದಿನಾಂಕ:21.02.2018 ರಲ್ಲಿ ಆದೇಶವನ್ನು ಹೊರಡಿಸಲಾಗಿರುತ್ತದೆ. ಅದರಂತೆ ಒಳಚರಂಡಿ ಕೊಳವೆ ಮಾರ್ಗ ಇರುವ ಪ್ರದೇಶದಲ್ಲಿ (Sewered Area) ದಿನಾಂಕ:19.01.2016 ಗಿಂತ ಮುಂಚಿತವಾಗಿ ನಿರ್ಮಿಸಿರುವ ಗೃಹ ಸಮುಚ್ಚಯ, ವಾಣಿಜ್ಯ ಕಟ್ಟಡ ಹಾಗೂ ಶಿಕ್ಷಣ ಸಂಸ್ಥೆಗಳಿಗೆ ತ್ಯಾಜ್ಯ ನೀರು ಸಂಸ್ಕರಣ ಘಟಕವನ್ನು ಅಳವಡಿಸಲು ವಿನಾಯಿತಿ ನೀಡಲಾಗಿರುತ್ತದೆ.

**ಸಂಖ್ಯೆ: ನಅಇ 46 ಎಂಎನ್ಐ 2021**

ಬಿ.ಎಸ್. ಯಡಿಯೂರಪ್ಪ (signature)

(ಬಿ.ಎಸ್. ಯಡಿಯೂರಪ್ಪ)

ಮುಖ್ಯಮಂತ್ರಿ